**ದಿಃ 6-07-2023 ರಂದು ಸಲ್ಲಿಸಿದ**
**ಮಧ್ಯಂತರ ಅರ್ಜಿ ನಂ. 4 ರ ಮೇಲೆ ಆದೇಶ**

1. ಅರ್ಜಿದಾರ/ವಾದಿ ಪ್ರಸ್ತುತ ಅರ್ಜಿ ಸಲ್ಲಿಸಿ ಅರ್ಜಿಯಲ್ಲಿ ತಿಳಿಸಿದ ನಿಯೋಜಿತ ಪ್ರತಿವಾದಿಯರನ್ನು ಹಾಗೂ ಅರ್ಜಿಯಲ್ಲಿ ತಿಳಿಸಿದ ಆಸ್ತಿಗಳನ್ನು ದಾವೆಯಲ್ಲಿ ಸೇರ್ಪಡೆಗೊಳಿಸುವಂತೆ ಪ್ರಸ್ತುತ ಅರ್ಜಿ ವಿನಂತಿಸಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ವಾದಿಗೆ ಸಂಬಂಧಿಸಿದ ಹಿಸ್ಸೆಯನ್ನು ಹಂಚಿಕೆ ಮಾಡುವುದಾಗಿ ಪ್ರತಿವಾದಿಯರು ದಾವೆ ಸಲ್ಲಿಸುವಾಗ ತಿಳಿಸಿದ್ದು, ತದನಂತರದಲ್ಲಿ ಅಲ್ಲಗಳೆದಿರುತ್ತಾರೆ. ಕಾರಣ ಕುಟುಂಬದ ಎಲ್ಲ ಸದಸ್ಯರನ್ನು ಹಾಗೂ ಉಳಿದ ದಾವಾಸ್ತಿಗಳನ್ನು ದಾವೆಯಲ್ಲಿ ಸೇರ್ಪಡೆಗೊಳಿಸಿ ಪಾಲುವಾಟ್ನೆ ಕೇಳಿ ವಾದಪತ್ರವನ್ನು ತಿದ್ದುಪಡಿ ಮಾಡಲು ಅನುಮತಿಸಬೇಕೆಂದು ವಿನಂತಿಸಿರುತ್ತಾರೆ.

3. ಸದರಿ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿ ಅರ್ಜಿಯಲ್ಲಿ ತಿಳಿಸಿದ ಸಂಗತಿಗಳು ಸತ್ಯಕ್ಕೆ ದೂರವಾಗಿದ್ದಿರುತ್ತದೆ. ಅರ್ಜಿಯಲ್ಲಿ ತಿಳಿಸಿದ ಬೆಳಸೆ ಹಾಗೂಾ ಶಿರೂರು ವ್ಯಾಪ್ತಿಯ ಜಮೀನುಗಳು 8 ರಿಂದ 40 ನೇ ಪ್ರತಿವಾದಿಯರ ಜಮೀನುಗಳಾಗಿರುತ್ತವೆ. ಸದರಿ ಜಮೀನುಗಳು ಯಾವ ಮೂಲಕ ಬಂದಿರುತ್ತವೆ ಎಂಬುವುದನ್ನು ತಕರಾರಿನಲ್ಲಿ ತಿಳಿಸಿ ಅರ್ಜಿಯನ್ನು ವಜಾಗೊಳಿಸಲು ವಿನಂತಿಸಿರುತ್ತಾರೆ.

4. ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ...........

**ಅಂಶಗಳು**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿಯರು ಅರ್ಹರಿರುತ್ತಾರೆಯೇ?

2. ಯಾವ ಆದೇಶ ?

5. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

6. **ಅಂಶ ನಂ.1**:- ದಾವಾಸ್ತಿ ತಮ್ಮ ತಂದೆಗೆ ಮೌಖಿಕ ಪಾಲುವಾಟ್ನೆ ಮುಖಾಂತರ ಬಂದಿರುತ್ತದೆ, ಕಾರಣ ಅದಕ್ಕೆ ತಾವು ಮಾತ್ರ ಮಾಲೀಕರು ಹಾಗೂ ಕಬ್ಜೆದಾರರೆಂದು ಠರಾಯಿಸಲು ಹಾಗೂ ದಾವಾಸ್ತಿ ಕಬ್ಜಾ ವಹಿವಾಟಿಗೆ ಪ್ರತಿವಾದಿಯರು ತೊಂದರೆ ಉಂಟುಪಡಿಸಿರುವುದರಿಂದ ದಾವೆಯಲ್ಲಿ ವಾದಿಯರು ಮಾಗಣಿ ಮಾಡಿರುತ್ತಾರೆ. ದಾವೆಯಲ್ಲಿ ವಾದಿಯರ ಪರ ಸಾಕ್ಷಿಗಾಗಿ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಿ ಕುಟುಂಬದ ಎಲ್ಲ ಆಸ್ತಿಗಳನ್ನು ಹಾಗೂ ಹಿಸ್ಸೆದಾರರನ್ನು ಸೇರಿಸಿ

ಪಾಲುವಾಟ್ನಿ ಕೇಳಲು ಅವಶ್ಯವಿದ್ದ ಕುರಿತು ವಾದಪತ್ರದಲ್ಲಿ ಸೇರ್ಪಡೆಗೊಳಿಸಬೇಕೆಂದು ಅರ್ಜಿಯಲ್ಲಿ ತಿಳಿಸಿರುತ್ತಾರೆ.

7. ಪ್ರಸ್ತುತ ದಾವೆಯನ್ನು ದಾವಾಸ್ತಿಯ ಕುರಿತು ಮಾಲೀಕತ್ವದ ಸಲುವಾಗಿ ಮತ್ತು ಅದರ ಕಬ್ಜಾ ವಹಿವಾಟಿಗೆ ತೊಂದರೆ ಉಂಟುಪಡಿಸಿರುತ್ತಾರೆಂದು ಸಲ್ಲಿಸಿದ್ದು, ತದನಂತರದಲ್ಲಿ ಕುಟುಂಬದ ಎಲ್ಲ ಆಸ್ತಿಗಳನ್ನು ಸೇರಿಸಿ ಪಾಲುವಾಟ್ನಿ ಮಾಡಲು ವಾದಿಯರು ಪ್ರಸ್ತುತ ಅರ್ಜಿಯಲ್ಲಿ ಮಾಗಣಿ ಮಾಡಿರುತ್ತಾರೆ. ಸದರಿ ಸಂಗತಿಯನ್ನು ಪ್ರತಿವಾದಿಯರು ಅಲ್ಲಗಳೆದಿರುತ್ತಾರೆ. ದಾವಾಸ್ತಿ ಹಾಗೂ ಮಧ್ಯಂತರ ಅರ್ಜಿಯಲ್ಲಿ ತಿಳಿಸಿದ ಆಸ್ತಿಗಳು ಕುಟುಂಬದ ಆಸ್ತಿಗಳಾಗಿರುತ್ತವೆಯೇ ಹಾಗೂ ವಾದಿ-ಪ್ರತಿವಾದಿಯರು ದಾವೆಯಲ್ಲಿ ಕೇಳಿದ ಮಾಗಣಿಗಳನ್ನು ಪಡೆಯಲು ಅರ್ಹರಿರುತ್ತಾರೆಯೇ ಎಂಬುವುದನ್ನು ಸಾಕ್ಷ್ಯಾಧಾರ ಪಡೆಯದೇ ಈ ಹಂತದಲ್ಲಿ ನಿರ್ಧರಿಸಲಾಗದು. ಕಾರಣ ಅಂಶ ನಂ. 1ಕ್ಕೆ " **ಸಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

8. **ಅಂಶ ನಂ. 2**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

## ಆದೇಶ

ದಿಃ 6-07-2023 ರಂದು ಸಲ್ಲಿಸಿದ ಮಧ್ಯಂತರ ಅರ್ಜಿ ನಂ. 4 ನ್ನು ರೂ. 200/- ಖರ್ಚಿನ ಮೇರೆಗೆ ಪುರಸ್ಕರಿಸಲಾಗಿದೆ.

ವಾದಪತ್ರದ ತಿದ್ದುಪಡಿಗಾಗಿ ಪ್ರಕರಣವನ್ನು ದಿಃ 12-09-2023 ರಂದು ಕರೆಯಿರಿ.

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**